"ಅಮ್ಮನಿಗೆ ನಮ್ಮ ಮೇಲಿನ ಪ್ರೀತಿಗಿಂತ ಆ ವ್ಯಕ್ತಿಯ ಮೇಲಿನ ಪ್ರೀತಿಯೇ ಹೆಚ್ಚಾ? ಅವಳು ನಮ್ಮನ್ನೆಂದೂ ಪ್ರೀತಿಸಿಯೇ ಇಲ್ಲವಾ? ಬೇಕಾದರೆ ನಮ್ಮನ್ನೂ ಅವಳೊಡನೆ ಕರೆದೊಯ್ಯಬಾರದಿತ್ತಾ?" ಎಂದು.

ಅಣ್ಣ ಹೀಗೆ ಉತ್ತರಿಸಿದ: "ಅಮ್ಮನೆಂದುಕೊಳ್ಳಲು ಹೇಳಿದ ಹೆಂಗಸನ್ನು ಸತ್ತರೂ ಅಂದುಕೊಳ್ಳೋದಿಲ್ಲ ಎಂದೆಯಲ್ಲ! ಮತ್ತೆ ಅಪ್ಪನೆಂದುಕೊಳ್ಳಲು ಹೇಳುವವನನ್ನು ಅಪ್ಪನೆಂದುಕೊಳ್ಳಬಲ್ಲೆಯಾ? ಎಲ್ಲಿದ್ದರೂ ನಮ್ಮವರು ಅಂತ ಸಿಗುವುದು ಒಬ್ಬರೇ. ಇದೆಲ್ಲಾ ಯೋಚನೆ ಮಾಡದೆ ಅಭ್ಯಾಸದ ಕಡೆಗೆ ಲಕ್ಷ್ಯಕೊಡು."

"ನನ್ನ ಕಾಲಿಗೆ ಸುತ್ತಿಕೊಂಡು ನೀನು ಅತ್ತಿದ್ದ ದಿನ, ನಿನ್ನನ್ನು ನನ್ನೊಂದಿಗೆ ಕರೆತರುತ್ತಾ ಇಷ್ಟು ವರ್ಷ ಇರಿಸಿಕೊಳ್ಳಬಲ್ಲೆ ಎಂದು ನಾನು ಎಣಿಸಿರಲಿಲ್ಲ. ನಾವಿಬ್ಬರೂ ಹೇಗೆ ಬೆಸೆದುಕೊಂಡುಬಿಟ್ಟೆವು ನೋಡು. ಮನೆಯಲ್ಲಿ ಸುಳಿದಾಡುವ ಹೆಣ್ಣುಮಗಳು, ಆ ಮನೆಗೆ ಅದೆಷ್ಟು ಜೀವ ತುಂಬುತ್ತಾಳೆಂದು ನನಗೀಗ ಅರ್ಥವಾಯಿತು. ನಿನ್ನನ್ನು ಕರೆತಂದಿದ್ದಕ್ಕೆ ನನ್ನ ಮಾತು ಗೆಲ್ಲಿಸಿ ಇಷ್ಟೆತ್ತರಕ್ಕೆ ಬೆಳೆದು ನಿಂತೆ. ಹೋಗಿ ನಿನ್ನ ಅಪ್ಪನನ್ನು ಕಂಡು, ಅವನಿಂದ ಆಶೀರ್ವಾದ ಪಡೆದು ಒಂದು ನೌಕರಿಯಲ್ಲಿ ಸೇರು. ಎಷ್ಟಾದರೂ ಅವನು ನಿನ್ನ ತಂದೆ. ಆ ಮಕ್ಕಳಿಗೇನಾದರೂ ತೆಗೆದುಕೊಂಡು ಹೋಗು. ಆಕೆಗೂ, ನಿನ್ನ ಅಪ್ಪನಿಗೂ ಬಟ್ಟೆ ತೆಗೆದುಕೊಂಡು ಹೋಗು" ಎಂದು ನನ್ನನ್ನು ಅತ್ತೆ ಅಪ್ಪನ ಬಳಿಗೆ ಕಳಿಸಿದಳು.



ಆಗ ಕೇಳಿದೆ ಅಪ್ಪನನ್ನು ಮೊದಲ ಸಲ ಮತ್ತು ಕೊನೆಯ ಸಲ, "ಅಮ್ಮ ಯಾಕೆ ಹೊರಟುಹೋದಳು ಅಪ್ಪಾ? ನೀನು ಅವಳನ್ನು ಚೆನ್ನಾಗಿ ನೋಡಿಕೊಂಡಿಲ್ಲವಾ? ಅವಳು ಬರೆದಿಟ್ಟಿದ್ದ ಕಾಗದವನ್ನು ಯಾಕೆ ಹರಿದುಬಿಟ್ಟೆ? ಅದು ಇದ್ದಿದ್ದರೆ ನಮಗೂ ತಿಳಿಯುತ್ತಿತ್ತಲ್ಲವಾ?"

ನನ್ನ ವಯಸ್ಸು ನನಗೆ ಒಂದಿಷ್ಟು ಧೈರ್ಯವನ್ನು ಕೊಟ್ಟರೆ, ಅಪ್ಪನ ವಯಸ್ಸು ಅವರನ್ನು ಮತ್ತೊಂದಿಷ್ಟು ಮಿದುಗೊಳಿಸಿದಂತಿತ್ತು. ಸುತ್ತಲೂ ನೋಡಿ, ನನಗೆ ಅಮ್ಮನೆಂದು ಕರೆಯಲು ಹೇಳಿದ ಆಕೆ ಅಲ್ಲಿಲ್ಲವೆಂದು ಖಚಿತಪಡಿಸಿಕೊಂಡು, "ನಾನು ಭೂಲೋಕದ ಮನುಷ್ಯನಮ್ಮಾ! ಅವಳು ಊರ್ಧ್ವಲೋಕದವಳು. ಅದಕ್ಕಾಗಿಯೇ ಈ ಲೋಕದಲ್ಲಿ ಇರಲಾಗದೆ ಹೊರನಡೆದಳು. ಇದಕ್ಕಿಂತ ಹೆಚ್ಚು ಹೇಳಲಿಕ್ಕೆ ಏನೂ ಇಲ್ಲ" ಎಂದ. ಅದು ವಾಸ್ತವವೋ ವ್ಯಂಗ್ಯವೋ ನನಗೆ ಅರ್ಥವಾಗಲೇ ಇಲ್ಲ.

ಆ ಊರ್ಧ್ವಲೋಕದ ಮನುಷ್ಯ, "ಆವೋ ಹುಜೂರ್, ತುಮ್ ಕೋ ಸಿತಾರೋಂ ಮೇ ಲೇ ಚಲೂಂ" ಎಂದು ಅವಳನ್ನು ಚುಕ್ಕಿ ಚೆಲ್ಲಿದ ಹಾದಿಗೆ ಕೈ ಹಿಡಿದು ಕರೆದೊಯ್ದನೇ? ಅಲ್ಲಾದರೂ ಅವಳು ತಾನು ಬಯಸಿದ್ದ ಪ್ರೀತಿಯನ್ನು ಪಡೆದಳೇ? ಹೇಗೆ ತಿಳಿಯುತ್ತದೆ ನನಗೆ?

ಓದುತ್ತಿದ್ದ ಪುಸ್ತಕದೊಳಗೆ ದೃಷ್ಟಿ ನೆಡಲು ಸಾಧ್ಯವಾಗದೆ ಇದ್ದಾಗಲೂ, ನಿದ್ದೆ ನನ್ನೊಡನೆ ಕಣ್ಣುಮುಚ್ಚಾಲೆಯಾಡುವಾಗಲೂ, ಸರಿಯಾಗಿ ಅದೇ ಸಮಯಕ್ಕೆ ಅಟ್ಲಾಂಟಿಕ್ ತೀರದಿಂದ ಅಣ್ಣ ಕರೆಯುತ್ತಾನೆ. ನನ್ನೊಡನೆ ಯಾವಾಗ ಮಾತನಾಡಬೇಕೋ ಅವನೊಬ್ಬನಿಗೆ ಮಾತ್ರ ಗೊತ್ತು.

"ಏನ್ ವಿಶೇಷ ಅಮ್ಮಡೂ?"—ಕೇಳಿದ.